ಆಳವಾದದ್ದು. ಕಪ್ಪೂ ಅಲ್ಲದ, ಬಿಳಿಯೂ ಅಲ್ಲದ ಬೂದು ಬಣ್ಣದ್ದು. ಈ ಬೂದುಬಣ್ಣವನ್ನು ಅದರ ಹಲವು ಟೆಕ್ಸ್ಚರ್‌ಗಳ ಸಮೇತ ಹಿಡಿದಿಡುವ ಪ್ರಯತ್ನ ಮಲಯಾಳಂನ 'ಅಮ್ಮ ಅರಿಯಾನ್' ಸಿನಿಮಾ.

'ಅಮ್ಮ ಅರಿಯಾನ್' ಚಿತ್ರವೂ ಒಂದು ಸಾವು ಮತ್ತದರ ಸುದ್ದಿಯನ್ನು ಮುಟ್ಟಿಸುವ ಎಳೆಯನ್ನೇ ಹೊಂದಿದೆ. ಈ ಚಿತ್ರದ ಕಥೆಯನ್ನು ತುಂಬ ಸುಲಭವಾಗಿ ಕೆಲವೇ ಸಾಲಿನಲ್ಲಿ ಹೇಳಿಬಿಡಬಹುದು:

ಪುರುಷನ್ ಎನ್ನುವವನು ಕೇರಳದ ತನ್ನೂರಿನಿಂದ ದೆಹಲಿಗೆ ಹೊರಟಿದ್ದಾನೆ. ಆದರೆ ಅವನಿಗೆ ದಾರಿ ಮಧ್ಯ ಒಂದು ಶವ ಕಾಣಿಸುತ್ತದೆ. ಆ ಶವವನ್ನು ತಾನು ಎಲ್ಲಿಯೋ ನೋಡಿದ್ದೇನೆ ಎಂದೆನಿಸತೊಡಗುತ್ತದೆ. ಅವನು ಯಾರು ಎಂದು ಪತ್ತೆ ಮಾಡಿ ಸತ್ತ ಸುದ್ದಿಯನ್ನು ಅವನ ಅಮ್ಮನಿಗೆ ಮುಟ್ಟಿಸಬೇಕು ಎಂದು ನಿರ್ಧರಿಸುತ್ತಾನೆ. ಹಾಗೆಯೇ ಅವನ ಸ್ನೇಹಿತರನ್ನೆಲ್ಲ ಸಂಪರ್ಕಿಸಿ ಅವನ ಬಗ್ಗೆ ತಿಳಿದುಕೊಂಡು ಹಲವು ಜನರು ಸೇರಿಕೊಂಡು ವಯನಾಡ್‌ನಿಂದ ಕೊಚ್ಚಿಯವರೆಗೆ ಹೋಗಿ ಅವನ ಅಮ್ಮನಿಗೆ ಸುದ್ದಿ ಮುಟ್ಟಿಸುತ್ತಾರೆ.

ಇದು ಚಿತ್ರದ ಕಥೆ. ಆದರೆ ಒಂದು ಒಳ್ಳೆಯ ಸಿನಿಮಾದ ಕಥೆಯನ್ನು ಹೇಳಿದರೆ ಏನನ್ನೂ ಹೇಳಿದ ಹಾಗಾಗುವುದಿಲ್ಲ. 'ದೀಪ ಆರಿತು' ಎಂಬ ಮಾಹಿತಿಯನ್ನು ಹೇಳಿದರೆ ಬೆಳಕಿನ ಸಾವಿನ ಗಾಢ ಅನುಭವವನ್ನು ದಾಟಿಸಿದಂತಾಗುತ್ತದೆಯೇ? ಅಲ್ಲದೆ, ಈ ಚಿತ್ರದ ನಿರ್ದೇಶಕ ಜಾನ್ ಅಬ್ರಹಾಂ ಅವರ ಉದ್ದೇಶವೂ ಕಥೆಯನ್ನು ಹೇಳಿ ಕುತೂಹಲ ತಣಿಸುವುದು ಅಲ್ಲವೇ ಅಲ್ಲ. ಆ ಕುತೂಹಲಕ್ಕೆ ಅವಕಾಶವೇ ಇಲ್ಲದ ಹಾಗೆ, ಪ್ರೇಕ್ಷಕನ ಜತೆಗೆ ಸಾಧ್ಯವಾದಷ್ಟೂ 'ಅಂತರ' ಇಟ್ಟುಕೊಂಡೇ ಇಡೀ ಸಿನಿಮಾ ಕಥನವನ್ನು ಕಟ್ಟಿದ್ದಾರೆ ಅವರು. ಹಾಗಾಗಿ ಇದು ಕುತೂಹಲ ತಣಿಸುವ ಕಥೆ ಅಲ್ಲ; ಕುತೂಹಲವನ್ನು ಮೀರಿ ಸಂವಾದ ನಡೆಸುವ, ನಮ್ಮನ್ನು ಬೆಳೆಸುವ ಕಥನ. ಈ ಕಥನವನ್ನು ದಾಟಿಸಲು ಸಾಧ್ಯವಾದರೆ ಅದೇ ಈ ಚಿತ್ರದ ಸರಿಯಾದ ವಿಶ್ಲೇಷಣೆಯೂ ಆಗಬಹುದು.

ಪುರುಷನ್ ಎನ್ನುವ ತರುಣ ತನ್ನ ಹಳ್ಳಿಯಿಂದ ದೆಹಲಿಗೆ ಹೊರಟಿದ್ದಾನೆ. 'ತನ್ನನ್ನು ತಾನು ಹುಡುಕಿಕೊಳ್ಳಬೇಕು' ಎನ್ನುವುದು ಅವನ ಈ ಪ್ರಯಾಣದ ಮೂಲ ಉದ್ದೇಶ. ಜತೆಗೆ ಗೆಳತಿಯ ಕರೆಯ ಸೆಳೆತವೂ ಇದೆ. ಹೊರಟ ಮಗನನ್ನು ಅಮ್ಮ ತಡೆಯುತ್ತಿಲ್ಲ (ತಡೆದರೆ ನಿಲ್ಲಲಾರ ಎಂಬುದೂ ಗೊತ್ತಿರುವಂತಿದೆ). ಅವಳದೊಂದೇ ಮಾತು: ಮಗಾ, ಎಲ್ಲಿಗಾದ್ರೂ ಹೋಗು. ಆದ್ರೆ ಎಲ್ಲಿದೀಯಾ ಅಂತ ನಂಗೆ ಪತ್ರ ಬರೆದು ಸುದ್ದಿ ಮುಟ್ಟಿಸ್ತಿರು. ಈಗ ಕಾಲ ಅಷ್ಟು ಸರಿ ಇಲ್ಲ.

ಆದರೆ ಮಗನಿಗೆ ಪತ್ರ ಬರೆಯುವುದು ಇಷ್ಟವಿಲ್ಲ. 'ನಿಂಗೊತ್ತಲ್ಲ, ನಾನು ಪತ್ರಗಿತ್ರ ಎಲ್ಲ ಬರಿಯೂದಿಲ್ಲ' ಎನ್ನುತ್ತಾನೆ. ಆದರೂ ತಾಯಿಯ ಒತ್ತಾಯಕ್ಕೆ ಹೂಂಗುಟ್ಟಿ ನಡೆಯುತ್ತಾನೆ. ಹೊರಟ ಮಗನನ್ನು ನಿರ್ಲಿಪ್ತವಾಗಿ ನೋಡುತ್ತ ಕಂಬಕ್ಕೊರಗಿ ನಿಲ್ಲುತ್ತಾಳೆ ತಾಯಿ.

ತಾಯಿ ಮತ್ತು ಪ್ರಯಾಣ ಎನ್ನುವುದು ಚಿತ್ರದುದ್ದಕ್ಕೂ ಮತ್ತೆ ಮತ್ತೆ ಕಾಣಿಸುತ್ತವೆ. ಪುರುಷನ್ ಅಥವಾ ಅವನಂಥವರ ನಡಿಗೆಯನ್ನು ಹೊಲಿಯುವ ದಾರದಂತೆ ದಾರಿಗಳೂ ಸೂಜಿಯಂತೆ ತಾಯಂದಿರೂ ಕಾಣಿಸುತ್ತಾರೆ.

ಒಬ್ಬ ತರುಣ ಸತ್ತಿದ್ದಾನೆ. ಬೆಟ್ಟದ ತುದಿಯ ಒಂಟಿ ಮರದ ಮೊಂಡು ಕೊಂಬೆಗೆ ನೇಣುಹಾಕಿಕೊಂಡು ಸತ್ತಿದ್ದಾನೆ. ಅರ್ಧ ಕಡಿದ ಕೊಂಬೆಯ ಬದಿಗೆ ಚಿಗುರಿದ ಸಣ್ಣ ಚಿಗುರುಗಳ ಜತೆಗೆ ಜೀವ ತೆಗೆದುಕೊಂಡ ಹಗ್ಗವೂ ಗಾಳಿಗೆ ಹೊರಳಾಡುತ್ತಿದೆ. ಅದನ್ನು ನೋಡುತ್ತ ಕೂತ ಪುರುಷನ್‌ನ ಮನಸ್ಸೊಳಗೆ ದುಗುಡ, ಕೋಳುಕಂಬದ ಸಂದಿಯಲ್ಲಿ ಬಳಚುವ ಹಾವಿನ